**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯದಲ್ಲಿ, ತರೀಕೆರೆ.**

**ಸಿ.ಸಿ. 1200/2023**

**ಪಿರ್ಯಾದುದಾರರು** ಃ ಸರ್ಕಾರದ ಪರವಾಗಿ ತರೀಕೆರೆ ಪೊಲೀಸರಿಂದ

**-ವಿರುದ್ಧ-**

**ಆರೋಪಿ/ತರು** ಃ ವಿಜಯಕುಲೇರ್ ಬಿನ್ ಹೊನ್ನಪ್ಪ, 41 ವರ್ಷ, ಚಾಲಕ, ವಾಸಃವಿದ್ಯಾನಗರ, ಎಂ ಜೆ ಎಂ ಲೇಔಟ್, ಶಿವಮೊಗ್ಗ.

**-ಃಆಪಾದನೆಃ-**

ದಿನಾಂಕಃ27.11.2022 ರಂದು ಚಾಸಾ-1 ರವರ ತಂದೆ ನಾಗರಾಜ್ ರವರು ಅವರ ಮನೆಗೆ ಸಂಬಂಧಿಕರು ಬಂದಿದ್ದರಿಂದ ಚಿಕನ್ ತರಲು ಮನೆಯಿಂದ ಮಧ್ಯಾಹ್ನ 1-15 ಗಂಟೆಗೆ ಅವರ ಬಾಬ್ತು ಕೆಎ-18/ಇಬಿ-4268 ರ TVS EGO ಮೊಪೆಡ್ ನಲ್ಲಿ ಹೊರಟು ತಮ್ಮ ಕೆಲಸ ಮುಗಿಸಿಕೊಂಡು ವಾಪಾಸ್ಸು ಮಧ್ಯಾಹ್ನ 1-30 ರ ಸಮಯದಲ್ಲಿ ಬಿ ಹೆಚ್ ರಸ್ತೆಯ MSIL ನ ಮುಂದೆ ಹೋಗುತ್ತಿರುವಾಗ ಆರೋಪಿಯಾದ ನೀವು ಕೆಎ-01/ಎಫ್ -4457 KSRTC ಐರಾವತ ಬಸ್ಸನ್ನು ಬಸ್ಸನ್ನು ಅತೀವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಸದರಿ ಬೈಕಿಗೆ ಡಿಕ್ಕಿಯನ್ನುಂಟು ಮಾಡಿದ್ದು, ಆ ಮೂಲಕ ನೀವು **ಭಾರತೀಯ ದಂಡ ಸಂಹಿತೆಯ ಕಲಂ.279** ರೀತ್ಯಾ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಆರೋಪಿಯಾದ ನೀವು ಮೇಲೆ ಹೇಳಿದ ವಾಹನವನ್ನು ಮೇಲೆ ಹೇಳಿದ ರೀತಿಯಲ್ಲಿ ಚಾಲನೆ ಮಾಡಿಕೊಂಡು

ಬಂದು ಅಪಘಾತಪಡಿಸಿದ ಪರಿಣಾಮ ಚಾಸಾ-1 ರವರ ತಂದೆ ಬೈಕಿನ ಕೆಳಗೆ ಬಿದ್ದು ಬಲಗಡೆ ಕಾಲಿಗೆ ಹಾಗೂ ತಲೆಗೆ ತೀವ್ರತರ ಪೆಟ್ಟಾಗಿದ್ದು ನಂತರ ಅವರನ್ನು ಆಸ್ಪತ್ರೆಗೆ ಸೇರಿಸಿದ್ದು ನಂತರ ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗದ ಮೆಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿದ್ದರೂ ಸಹಾ ಚಿಕಿತ್ಸೆ ಫಲಕಾರಿಯಾಗದೆ ದಿಃ27.11.2022 ರಂದು ಮೃತಪಟ್ಟಿರುತ್ತಾರೆ, ಆ ಮೂಲಕ ನೀವು **ಭಾರತೀಯ ದಂಡ ಸಂಹಿತೆಯ ಕಲಂ.304-ಎ** ರೀತ್ಯಾ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಮಾಡಿರುತ್ತೀರಿ.

ಪ್ರಶ್ನೆ-1 ಈಗ ಓದಿ ಹೇಳಿದ ನಿಮ್ಮ ಮೇಲೆ ಮಾಡಿರುವ ಆರೋಪಗಳು ತಿಳಿಯಿತೆ?

ಉತ್ತರಃ

ಪ್ರಶ್ನೆ-2ಃ ಸದರಿ ಆರೋಪಗಳನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಉತ್ತರಃ

(ಮೇಲ್ಕಂಡ ಆರೋಪಣೆಯನ್ನು ಆರೋಪಿಗೆ ಓದಿ ಹೇಳಿ ವಿವರಿಸಿದ ನಂತರ ಆರೋಪಿ ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ.)

ದಿನಾಂಕಃ

Sd/-
ಹಿ. ಪ್ರಧಾನ ಪ್ರದನ್ಯಾದಂ, ತರೀಕೆರೆ

ಆರೋಪಿಯ ಸಹಿಃ